ಮಂತ್ರವನ್ನು ಉದ್ಘೋಷಿಸುತ್ತಾ ಬಂದಿತ್ತು. ಅದು ಬಿಟ್ಟರೆ ಆ ಕೋಟೆ ಯೋಚನೆಗೂ ನಿಲುಕದಷ್ಟು ದಕ್ಷತೆಯಿಂದ ಕೂಡಿತ್ತು.

ನನ್ನ ಹಿಂಸೆಯ ನಾಲ್ಕು ತಿಂಗಳುಗಳ ಅವಧಿಯಲ್ಲಿ ನನಗೆ ಒಂದೇ ಒಂದು ಸಲ ಬಿಟ್ಟರೆ, ಮತ್ತೆ ತಪ್ಪಿ ಕೂಡ ಕಾಗದದ ಒಂದು ದೊಡ್ಡ ಚೂರು ಸಿಕ್ಕಿದ್ದಿಲ್ಲ. ಒಂದು ಸಲ ಮಾತ್ರ ಒಬ್ಬ ಪಹರೆಯವನು ನನಗೆ ಸ್ವಲ್ಪ ಸಕ್ಕರೆ ತಂದುಕೊಟ್ಟ; ಅವನು ಅದನ್ನು ಹಳೆಯ ವರ್ತಮಾನ ಪತ್ರಿಕೆಯೊಂದರ ಅರ್ಧ ಹಾಳೆಯಲ್ಲಿ ಕಟ್ಟಿ ತಂದಿದ್ದ. ಅದು ಉರ್ದು ಭಾಷೆಯದು. ಅತ್ಯಂತ ಪ್ರಾಚೀನವಿದ್ದು, ಈಗ ಅರ್ಥವೇ ಆಗದಂಥ ಲಿಪಿಯೊಂದನ್ನು ಹೊಸದಾಗಿ ಗುರುತಿಸಿ ಕಂಡುಹಿಡಿಯುತ್ತಿರುವವನ ನಿಷ್ಠೆಯಿಂದ ನಾನದನ್ನು ಓದಿದೆ. ಅದು ಯಾವ ವಿಷಯವನ್ನು ಕುರಿತದ್ದು ಎನ್ನುವುದು ನನ್ನ ಅರಿವಿಗೆ ಬಂದದ್ದು ಆಮೇಲೆ; ಅದಕ್ಕೆ ಮುಂಚೆ ಸುಮಾರು ಎರಡು ತಾಸುಗಳ ಕಾಲ ನಾನು ಅದನ್ನು ಸುಮ್ಮನೆ ಓದುತ್ತಲೇ ಇದ್ದುಬಿಟ್ಟಿರಬೇಕು. ಕಾಳಿದಾಸ ಮತ್ತು ಶೇಕ್ಸ್‌ಪಿಯರ್ ಕುರಿತ ಪ್ರಬಂಧ ಅದು.

ನನಗೆ ಹಲ್ಲುಜ್ಜಲು ಬ್ರಷ್ ಅಥವಾ ಪೇಸ್ಟ್ ಇರಲಿಲ್ಲ. ಬೇವಿನ ಕಡ್ಡಿ ಕೂಡ ಸಿಕ್ಕುತ್ತಿರಲಿಲ್ಲ. ಆ ನಾಲ್ಕು ತಿಂಗಳ ಕಾಲವೂ ಸೋಪನ್ನೋ ಇದ್ದಿಲುಪುಡಿಯನ್ನೋ ಬೂದಿಯನ್ನೋ ಉಪಯೋಗಿಸಬೇಕಾಗಿತ್ತು. ನನ್ನ ರಕ್ಷಕರು ಪ್ರಾರಂಭದಲ್ಲಿ ನನಗೆ ಸ್ನಾನಕ್ಕೂ ಬಿಡುತ್ತಿರಲಿಲ್ಲ. ನಾನು ಆಹಾರ ತೆಗೆದುಕೊಳ್ಳುವುದನ್ನೇ ಬಿಟ್ಟೆ, ಅವರು ಸಡಲಿದರು. ಸುಮಾರು ಹತ್ತು ನಿಮಿಷ ನೀರಿನ ಕೊಳಾಯಿಯ ಕೆಳಗೆ ಇರಲು ಅವಕಾಶ ಕೊಟ್ಟರು. ತೀವ್ರ ಹಿಂಸೆಯ ದಿನಗಳಲ್ಲಿ ಇಷ್ಟು ಹೊತ್ತು ಮಾತ್ರ ಕೈಯಿಂದ ಕೋಳ ತಪ್ಪಿಸುತ್ತಿದ್ದರು. ಹರ್ಷಸಾರದ ಕ್ಷಣಗಳವು; ಇಂದ್ರಿಯ ಸುಖದ ಪರಮಸೀಮೆಯನ್ನು ಕಂಡ ಕ್ಷಣಗಳವು. ಆ ಕ್ಷಣಗಳಲ್ಲಿ, ಬಲವಂತ ನಿದ್ರಾನಾಶದ ಇಡೀ ಇಪ್ಪತ್ತನಾಲ್ಕು ಗಂಟೆಗಳ ಕುದಿತಾಪವೆಲ್ಲ ನನ್ನ ಮೈಯಿಂದ ಇಳಿದು ಹೋಗುತ್ತಿರುವ ಹಾಗೆ ಭಾಸವಾಗುತ್ತಿತ್ತು...

ಕಡ್ಡಾಯವಾಗಿ ನಿದ್ದೆ ತಪ್ಪಿಸಿದ ಅವಧಿಗಳಲ್ಲಿ ತೀರ ದೀರ್ಘವಾದದ್ದು ಹತ್ತು ಹಗಲು, ಹತ್ತು ರಾತ್ರಿಗಳ ಅಖಂಡ ಕಾಲದ್ದಾಗಿತ್ತು. ಅದರ ಕೊನೆಯಲ್ಲಿ ನನ್ನ ಬಾಯಿ, ಮೂಗುಗಳಿಂದ ರಕ್ತ ಬರತೊಡಗಿತ್ತು. ಮೂಗಿನಲ್ಲಿ ರಕ್ತ ಉಂಡೆಗಟ್ಟಿರುತ್ತಿತ್ತು. ನನಗೆ ವಿಪರೀತ ಜ್ವರವೂ ಬಂದಿದ್ದಿರಬೇಕು. ಅದು ಸಾಪ್ತಾಹಿಕ ಜ್ವರವೆಂದೂ, ಏಳು ದಿನ ಕಳೆದರೆ ಗುಣವಾಗುವುದೆಂದೂ ಜೈಲಿನ ವೈದ್ಯ ಹೇಳಿದ. ಅವನು ಆಗ ದೇಶದಲ್ಲಿ ತೀವ್ರ ಹೋರಾಟ ನಡೆಯುತ್ತಿದ್ದ ಪ್ರಶ್ನೆಗಳ ಬಗ್ಗೆ ಅರಿವೇ ಇಲ್ಲದವನಂತಿದ್ದ. ಆದರೆ ಅವನು ಪೂರಾ ನಿಷ್ಕರುಣಿಯಾಗಿದ್ದನೋ ಇಲ್ಲವೋ ಹೇಳಲಾರೆ...

... ಮಧ್ಯರಾತ್ರಿಯ ಅನಂತರ, ಅದೂ ಎರಡು ಗಂಟೆಯ ಹೊತ್ತಿನಲ್ಲಿ ಮತ್ತು ಆಮೇಲೆ, ರಗಳೆ ಹತ್ತಿಸುವಂತೆ ಏಕೋಧಾರೆ ಹನಿಯುತ್ತಲೇ ಇರುವ ಸಂಕಟ. ಇದು ಕೆಲವು ಸಲ ಚುಚ್ಚಿ ತಿನ್ನುವ ಜೀವಸಂಕಟವಾಗುತ್ತಿತ್ತು. ಉದ್ದಕ್ಕೂ ನನ್ನ ತಲೆ ಎಡೆಬಿಡದ ಮಬ್ಬಿನಲ್ಲಿ, ಮಂದ ನೋವಿನಲ್ಲಿ ಹುಗಿದ ಹಾಗಿದ್ದು, ರಾತ್ರಿ ಎರಡು ಗಂಟೆಯ ಮೇಲೆ ಒಳಗಿನ ಕುದಿ ಕೊತಗುಟ್ಟುವಂತಾಗುತ್ತಿತ್ತು. ಮುಂಜಾವಿನ ಮೊದಲ ಎಳೆ ಬೆಳಕು ಸುಳಿಯುವುದಕ್ಕೆ ಸ್ವಲ್ಪ ಮುಂಚೆ ಅದು ತನ್ನ ಶಿಖರ ಮುಟ್ಟುತ್ತಿತ್ತು.

ಕೆಲವು ವೇಳೆಯಂತೂ ನನ್ನ ತಲೆ ಮಂದ ಬೆಂಕಿಯ ಮೇಲೆ ಬೇಯುತ್ತಿರುವಂತೆ ಹಾಗೂ ತೆರೆತೆರೆಯಾಗಿ ಬಿಸಿಹೊಗೆ ಏಳುತ್ತಿರುವಂತೆ ಭಾಸವಾಗುತ್ತಿತ್ತು. ಒಂದೆರಡು ಸಾರಿಯಂತೂ, ಆ ಬೆಂಕಿಯ ಬಿಸಿಯನ್ನೋ, ಹೊಗೆಯ ಬಿಸಿ ತೇವವನ್ನೋ ಕೈಯಲ್ಲಿ ಮುಟ್ಟಿಮುಟ್ಟಿ ನೋಡಿಕೊಂಡದ್ದು ಈಗ ಕೂಡ ಸ್ಪಷ್ಟವಾಗಿ ನೆನಪಿದೆ... ಕೆಲವು ವೇಳೆ ನನ್ನ ತಲೆ ಫಳಾರೆಂದು ಸಿಡಿದು ಚೂರುಚೂರಾಗಿ ಹೋಗಲಿದೆ ಎನ್ನಿಸಿ, ಆ ಸಮಯಕ್ಕಾಗಿ ತೀವ್ರ ಯಾತನೆಪಡುತ್ತ ಕಾಯುತ್ತಿದ್ದೆ.

ರಾತ್ರಿ ಸುಮಾರು ಎರಡು ಗಂಟೆಯಿಂದ ಮುಂಜಾವಿನ ತನಕದ ಈ ಸಮಯದಲ್ಲಿ, ಕೆಲವು ಸಲ ಪೊಲೀಸರು ಮೇಜಿನ ಮೇಲೆ ಲೋಹದ ತುಂಡು ಕುಟ್ಟುತ್ತ ತಮ್ಮ ಆಟಕ್ಕಿಳಿಯುತ್ತಿದ್ದರು; ಅಥವಾ ಒಂದು ಪ್ರಶ್ನೆಯನ್ನು ಕೊನೆಯಿಲ್ಲವೆಂಬ ಹಾಗೆ ಮತ್ತೆ ಮತ್ತೆ ಕೇಳುತ್ತಲೇ ಇರುತ್ತಿದ್ದರು... ಇಷ್ಟಾಗಿಯೂ ಇಡೀ ಸನ್ನಿವೇಶದಲ್ಲಿ ಕುತೂಹಲದ ಒಂದು ತೆಳು ಎಳೆಯೂ ಬೆರೆತುಕೊಂಡಿತ್ತು. ಮುಂದಿನ ಕ್ಷಣದ ಸ್ವರೂಪ ಎಂಥದಿದ್ದೀತು, ಅದು ನನ್ನನ್ನು ದೈಹಿಕವಾಗಿ ಏನು ಮಾಡಬಹುದು ಹಾಗೂ ಅದು ತನ್ನ ಒತ್ತಡದಲ್ಲಿ ನನ್ನ ಮನಸ್ಸನ್ನು ಪುಡಿಗೊಳಿಸದೆ ಬಿಟ್ಟೀತೆ ಎಂದು ಕುತೂಹಲವಾಗುತ್ತಿತ್ತು...

ಎಷ್ಟೋ ಸಲ ಇನ್ನೇನು ಛಲ ಕಳೆದು ಕರಗಿಹೋದೆ ಎಂಬಂಥ ಸ್ಥಿತಿಗೆ ನನ್ನನ್ನು ತಂದುಬಿಟ್ಟಿದ್ದರು. ಈ ಯಾತನೆಯನ್ನು ಸಹಿಸಲು ಇನ್ನು ಶಕ್ಯವೇ ಇಲ್ಲ ಎನ್ನಿಸುತ್ತಿತ್ತು... ತಾಳಲು ಅಶಕ್ಯವಾದ ಯಾತನೆ ಎಂಬ ಯೋಚನೆಯಲ್ಲೇ ನಿಜಕ್ಕೂ ಏನೋ ಒಂದು ತಪ್ಪಿರಬೇಕು. ಅಂಥ ಯಾತನೆಯನ್ನು ನಾನು ಮೇಲಿಂದ ಮೇಲೆ ಅನುಭವಿಸಿದ್ದೆ. ಒಂದೊಂದು ಸಲವೂ ನಾನು ಅದನ್ನು ಸಹಿಸಿ ನಿಂತಿದ್ದೆ. ಆದಕಾರಣ, ಅದನ್ನು ಸಹಿಸಲು ಅಶಕ್ಯ ಎಂದು ಹೇಳುವುದಕ್ಕಾಗದು. ಹಾಗೆ ಸಹಿಸಲು ಅಶಕ್ಯ ಎನ್ನುವ ನೋವುಗಳ ಅನುಭವ ಹೆಚ್ಚಿದಂತೆಲ್ಲ, ಅದರ ಮುಂದಿನ ನೋವನ್ನು ಹೆಚ್ಚು ತಾಳ್ಮೆಯಿಂದ ಸಹಿಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ಯಾತನೆ ಹೆಚ್ಚಿದಂತೆಲ್ಲ ಜೊತೆಜೊತೆಯಾಗಿ ತಾಳ್ಮೆಯೂ ಹೆಚ್ಚುತ್ತ ಬರುವುದನ್ನು ನಾನೇ ಸ್ವಂತ ಕಂಡುಕೊಂಡಿರಲಿಲ್ಲವೆ?

... ಲಾಹೋರ್ ಕೋಟೆಯಲ್ಲಿ ನಾನು ಕಳೆಯಬೇಕಾದ ದಿನಗಳ ಸಂಖ್ಯೆಯನ್ನು ಕುರಿತು ಯೋಚಿಸಿದೆ. ಯಾವುದೋ ಒಂದು ನಿರ್ದಿಷ್ಟ ಅವಧಿಯ ಸೆರೆವಾಸ ವಿಧಿಸಿದ್ದಾಗಿದ್ದರೆ ಅಂಥ ಯೋಚನೆಗೆ ಆಧಾರವಿರುತ್ತಿತ್ತು. ಆದರೆ ನನ್ನನ್ನು ಅಲ್ಲಿಟ್ಟದ್ದು ಅನಿರ್ದಿಷ್ಟ ಅವಧಿಯ ನಿರ್ಬಂಧಕಾಜ್ಞೆಯ ಮೇಲೆ. ಹಾಗಿದ್ದರೂ ನಾನು ಆ ಹಿಂಸಾಗೃಹದಲ್ಲಿ ಕಳೆಯಬೇಕಾದ ದಿನಗಳೆಷ್ಟಿರಬಹುದು ಎಂದು ಯೋಚಿಸಿದೆ. ಈ ಯೋಚನೆ ಅದೃಷ್ಟದ ಭವಿಷ್ಯವನ್ನು ಕುರಿತ ಯೋಚನೆಯೇ ಆಗಿತ್ತು.

ಜಗತ್ತಿನ ಉದ್ದಕ್ಕೂ ಜನ ಅದೃಷ್ಟವೆಂಬ ಹೆಸರಲ್ಲಿ ಯೋಚಿಸುತ್ತಾರೆ; ಅದರಂತೆ ನಾನೂ ನನ್ನ ಈ ಹಿಂಸೆಯ ಅವಧಿಯನ್ನು ಸೀಮಿತವೆಂದೇ ಯೋಚಿಸಿದೆ. ಒಂದಲ್ಲ ಒಂದು ದಿನ ಅದು ಮುಗಿಯಲೇಬೇಕು. ಆ ದಿನ ಸ್ವಲ್ಪ ದೂರವಿದ್ದೀತು ಅಥವಾ ಹೆಚ್ಚು ದೂರವಿದ್ದೀತು. ಆ ದಿನ ಯಾವುದೆಂಬ ನಿಶ್ಚಿತ ತಾರೀಕು ನನಗೆ ತಿಳಿಯದು, ಆದರೂ ಆ ದಿನ ಇರುವುದೇನೋ ನಿಶ್ಚಿತವೇ.

ಈ ಹಿಂಸೆಯ ನರಕದಲ್ಲಿ ನಾನು ಕಳೆಯಬೇಕಾದ ದಿನಗಳ ಸಂಖ್ಯೆ ಕ್ರಮಕ್ರಮವಾಗಿ ಕ್ಷಯಿಸುತ್ತಿದೆಯೆಂಬ ಬಗ್ಗೆ ನಾನು ಭರವಸೆಗೊಳ್ಳಬಹುದಿತ್ತು. ನಾನು ಗೆದ್ದು ಕಳೆದ ಒಂದೊಂದು ದಿನವೂ ಅದೃಷ್ಟ ನನಗೆ ವಿಧಿಸಿದ ಹಿಂಸೆಯ ಅವಧಿಯಲ್ಲಿ ಒಂದೊಂದು ದಿನವನ್ನು ಕಡಿಮೆ ಮಾಡುತ್ತಿತ್ತು. ಇದು ಕೂಡ ಕಾಲವನ್ನು ಕುರಿತ ಚಿಂತನವೇ ಆಗಿತ್ತು; ಕಾಲದ ಹರ್ಷದಾಯಕ ಮುಖವನ್ನು ಕುರಿತದ್ದಾಗಿತ್ತು. ಭವಿಷ್ಯದಲ್ಲಿ ಆಸೆಗೊಂದು ಭರವಸೆಯಿದ್ದ ಹಾಗೆ ಕಂಡಿತು.'

ಹೀಗೆ ಲೋಹಿಯಾ ಬರ್ಬರ ಹಿಂಸೆಯ ನಡುವೆ ಭರವಸೆ, ಅಸಹಾಯಕತೆ, ಅನಾಥತೆ, ನಿರಾಶೆಗಳ ಸುಳಿಯಲ್ಲಿದ್ದಾಗ ಅವರೊಳಗಿನ ಸಿಟ್ಟು ಗರಿಗಟ್ಟಿಕೊಂಡು ಸೇಡಿನ ಯೋಚನೆಗಳೂ ಹುಟ್ಟುತ್ತಿದ್ದವು:

'ನನ್ನೊಳಗೆ ಸೇಡಿನ ಕ್ರೂರಭಾವನೆಗಳೂ ಮೊಳೆಯುತ್ತಿದ್ದುದು ನೆನಪಾಗುತ್ತದೆ. ಆ ಕಾಲದಲ್ಲೇ ನಾನು ಅತ್ಯಂತ ಕುಶಲವೂ ಸೂಕ್ಷ್ಮವೂ, ಅತ್ಯಂತ ನಾಜೂಕಿನದೂ ಆದ ಹಿಂಸೆಯ ಅನೇಕ ತಂತ್ರಗಳನ್ನು ಯೋಜಿಸಿದ್ದೆ. ಬ್ರಿಟನ್ ಮತ್ತು ಇಂಡಿಯಾವನ್ನು ಆಳುತ್ತಿದ್ದ ಅತ್ಯುನ್ನತರ ಮೇಲೆ ನಾನಿದನ್ನು ಒಂದು ರೀತಿಯ ಸ್ವಪ್ನಾವಸ್ಥೆಯಲ್ಲಿ ಪ್ರಯೋಗಿಸುತ್ತಿದ್ದೆ... ಅಂಥ ಯಂತ್ರ ಯೋಜನೆಗಳೆಲ್ಲ ಈಗ ಮರೆತುಹೋಗಿವೆ; ಒಂದು ಮಾಸಲು ನೆನಪಷ್ಟೆ ಉಳಿದಿದೆ:

ಅದೊಂದು ವಿಚಿತ್ರವಾದ ಬೋನು. ಅದನ್ನು ಗಡಗಡೆಯ ಮೂಲಕ ಮೇಲಕ್ಕೂ ಕೆಳಕ್ಕೂ ಎಳೆಯಬಹುದಿತ್ತು; ಹೆಚ್ಚು ಕಾಲ ಅದು ಎತ್ತರವಾದ ಒಂದು ಛಾವಣಿಗೆ ಏರಿಕೊಂಡೇ ನಿಂತಿರುತ್ತಿತ್ತು; ಬೋನಿನ ಎದುರಲ್ಲೆ ಮನುಷ್ಯನಿಗೆ ಏನೆಲ್ಲ ಬೇಕೆನ್ನಿಸುತ್ತದೋ ಅವನ್ನೆಲ್ಲ ಇಡಲಾಗುತ್ತಿತ್ತು— ಹತ್ತಿರ ಕಾಣಿಸುವಂತೆ, ಆದರೆ ಎಟುಕದ ಹಾಗೆ. ಅದರಲ್ಲಿ ಬೆಂಕಿ, ನೀರುಗಳನ್ನು ಬಳಸಿದ ಏನೇನೋ ವಿಚಿತ್ರ ತಂತ್ರಗಳಿದ್ದಂತೆ ಕೂಡ ನೆನಪು...'

ಈ ಥರದ ಸೇಡಿನ ಪ್ರಯೋಗದ ಕಲ್ಪನೆಯ ಜೊತೆಜೊತೆಗೇ ಸ್ವಾತಂತ್ರ್ಯ ಚಳುವಳಿಯನ್ನು ಇನ್ನಷ್ಟು ವ್ಯವಸ್ಥಿತವಾಗಿ ಸಂಘಟನೆ ಮಾಡುವ ಕನಸುಗಳೂ ಲೋಹಿಯಾರಲ್ಲಿ ಸುಳಿಯುತ್ತಿದ್ದವು.

ಲೋಹಿಯಾ ಭೂಗತರಾಗಿದ್ದಾಗಲೇ 'ಕಾಂಗ್ರೆಸ್ ಸಮಾಜವಾದಿ ಪಕ್ಷ' ನಿಷೇಧಕ್ಕೊಳಗಾಗಿತ್ತು. ಆದರೆ ಅವರ ಅದಮ್ಯ ಚೈತನ್ಯ ಹಾಗೂ ಸಂಘಟನೆಯ ಛಲ ಆ ನರಕದಲ್ಲೂ ಉಡುಗಿರಲಿಲ್ಲ!

(ಸಶೇಷ)